SN – 003

-3-

# I Semester B.Com. Examination, November/December 2014
## (Fresher) (CBCS)
## (2014-15 and Onwards)
## ಕನ್ನಡ ಭಾಷೆ – I
## ಸುವರ್ಣ ಸಂಪದ ಮತ್ತು ನಿಗೂಢ ಮನುಷ್ಯರು

Time : 3 Hours | Max. Marks : 70

I. ಅ) ಕೆಳಗಿನ ಪದ್ಯದ ಭಾವಾರ್ಥ ಬರೆಯಿರಿ : (1×6=6)

ಒಕ್ಕಲಗೇರ್ಯಾಗ ಮಳೆರಾಜಾ । ಅವರು
ಮಣ್ಣಾಗಿ ಹೋದರು ಮಳೆರಾಜಾ ।
ಬಣ್ಣದ ಗುಬ್ಬ್ಯಾರು ಮಣ್ಣಾಗಿ ಹೋದರು
ಅನ್ಯದ ದಿನ ಬಂದು ಮಳೆರಾಜಾ ।

ಆ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : (2×2=4)

1) ಪಾಂಚಾಲಿಯ ಜಡೆ
2) ಕೆ. ಎಸ್. ನರಸಿಂಹಸ್ವಾಮಿ
3) ಬೆಂಕಿಯ ಮಳೆ
4) ಜನಪದ ಸಾಹಿತ್ಯ.

ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) 'ಎಲ್ಲವೂ ಕಾವ್ಯಕ್ಕೆ ವಸ್ತುವಾಗಬಲ್ಲವು' – ಈ ಮಾತನ್ನು 'ಗೊಬ್ಬರ' ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ.
2) ತಾಯಿ – ಮಗಳ ಅಂತಃಕರಣದ ಸಂಬಂಧ 'ರೈಲ್ವೆ ನಿಲ್ದಾಣದಲ್ಲಿ' ಪದ್ಯದಲ್ಲಿ ಹೇಗೆ ಮೂಡಿ ಬಂದಿದೆ ? ನಿರೂಪಿಸಿ.

II. ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (2×5=10)

1) ರಾಮಯ್ಯ ಯಾರು ? ಅವನು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವೇನು ?
2) ಮರಸರನ ವ್ಯಕ್ತಿತ್ವ ಜಗನ್ನಾಥನಲ್ಲಿ ಭಯ ಹುಟ್ಟಿಸಲು ಕಾರಣವೇನು ?
3) ಪಟಾಸಿನ ಉಂಡೆ ಎಂದರೇನು ? ಅದನ್ನು ಏಕೆ ಬಳಸುತ್ತಿದ್ದರು ?

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1×10=10)**

1) ಗೋಪಾಲಯ್ಯ, ರಂಗಪ್ಪ ಮತ್ತು ಜಗನ್ನಾಥ – ಪರಸ್ಪರರಿಗೆ ನಿಗೂಢರಾಗಿ ಕಂಡದ್ದು ಹೇಗೆ ? ವಿವರಿಸಿ.

2) ನಿಸರ್ಗ ಮತ್ತು ಮನುಷ್ಯನ ಸಂಬಂಧ ಕಾದಂಬರಿಯಲ್ಲಿ ಹೇಗೆ ಚಿತ್ರಣಗೊಂಡಿದೆ ?

III. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(1×5=5)**

1) ತಳವಾರ ರಾಮಪ್ಪನ ಹೃದಯ ಶ್ರೀಮಂತಿಕೆಯನ್ನು ಪರಿಚಯಿಸಿ.

2) ಬಾಳಪ್ಪನವರನ್ನು 'ಅಭಿನವ ಬಸವಣ್ಣ' ಎಂದು ಏಕೆ ಕರೆಯುತ್ತಿದ್ದರು ?

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1×10=10)**

1) ಸಬರಮತಿ ಅವರ ಸಾಧನೆಗಳನ್ನು ಪರಿಚಯಿಸಿ.

2) 'ಕುಸಿಯುತ್ತಿರುವ ಸಾಂಸ್ಕೃತಿಕ ನೆಲೆಗಳು' ಲೇಖನದಲ್ಲಿ ಗುರುತಿಸಿರುವ ಸಂಸ್ಕೃತಿಯ ಲಕ್ಷಣಗಳನ್ನು ವಿವರಿಸಿ.

IV. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(1×5=5)**

1) ಎಂ. ಆರ್.ಪಿ. ನಿಗದಿಪಡಿಸುವವರು ಯಾರು ? ಯಾವ ಅಂಶಗಳನ್ನು ಆಧರಿಸಿ ಎಂ.ಆರ್.ಪಿ. ಯನ್ನು ನಿಗದಿ ಮಾಡಲಾಗುತ್ತದೆ ?

2) ಗ್ಯಾರೆಂಟಿ ಶುಲ್ಕ ಎಂದರೇನು ? ಅದನ್ನು ಯಾರು ಯಾರಿಗೆ ಸಲ್ಲಿಸಬೇಕು ?

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1×10=10)**

1) 'ವಿಶೇಷ ಆರ್ಥಿಕ ವಲಯ ' ಎಂದರೇನು ? ಕರ್ನಾಟಕದಲ್ಲಿ ಇದರ ಸಾಧನೆಯನ್ನು ಪರಿಚಯಿಸಿ.

2) 'ಭದ್ರತಾ ರಹಿತ ಸಾಲ ಯುವ ಜನಾಂಗಕ್ಕೆ ಒಂದು ವರದಾನ '– ಚರ್ಚಿಸಿ.

---